# ಕಲಬುರಗಿ ಪರಿಸರದ ಶೈಕ್ಷಣಿಕ ಪರಂಪರೆ :

ಡಾ. ಚಿದಾನಂದ ಚಿಕ್ಕಮಠ
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ-೩
ಮಿಂಚಂಚೆ : chidugc1118@gmail.com

ಪ್ರಸ್ತಾವನೆ :

'ಸೂರ್ಯನಗರಿ' ಎಂದೇ ಪ್ರಸಿದ್ಧವಾಗಿರುವ ಕಲಬುರಗಿಯು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ. ಕನ್ನಡದ ಮೊದಲ ಉಪಲಬ್ಧ ಗ್ರಂಥವಾದ 'ಕವಿರಾಜಮಾರ್ಗ'ವು ರಚಿತವಾದುದು ಇದೇ ಪರಿಸರದ ಮಾನ್ಯಖೇಟದಲ್ಲಿ ಬಾಳಿ ಬೆಳಗಿದ ರಾಷ್ಟ್ರಕೂಟ ಸಾಮ್ರಾಜ್ಯದ ಪ್ರಸಿದ್ಧ ದೊರೆ ನೃಪತುಂಗನ ಆಸ್ಥಾನ ಕವಿಯಾಗಿದ್ದ ಶ್ರೀವಿಜಯನಿಂದ. ಮೊದಲ ಗದ್ಯಕೃತಿಯಾದ 'ವಡ್ಡಾರಾಧನೆ' ಸಹ ಉದಿಸಿ ಬಂದದ್ದು ಇದೇ ಪರಿಸರದ ಮಣ್ಣಿನಿಂದ. ಕಲ್ಯಾಣದ ಚಾಲುಕ್ಯಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಸಾಮ್ರಾಜ್ಯದಲ್ಲಿ ಆಸ್ಥಾನ ಪಂಡಿತರೂ, ಚಕ್ರವರ್ತಿ ಗುರುಗಳೂ ಆಗಿದ್ದು 'ಮಿತಾಕ್ಷರ'ವೆಂಬ ಸಾರ್ವಕಾಲಿಕ ಶ್ರೇಷ್ಠ 'ನ್ಯಾಯಶಾಸ್ತ್ರ' ಗ್ರಂಥವನ್ನು ನೀಡುವುದರ ಮೂಲಕ ಜಗತ್ತಿಗೆ ನ್ಯಾಯ ಸಂಹಿತೆಯನ್ನು ಬೋಧಿಸಿದ 'ವಿಜ್ಞಾನೇಶ್ವರ'ರು ಹುಟ್ಟಿಬೆಳೆದದ್ದು ಸಹ ಇದೇ ಪರಿಸರದ ವ್ಯಾಪ್ತಿಗೆ ಬರುವ ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿಗೆ ಸೇರಿದ ಮರತೂರಿನಲ್ಲಿ ಎಂಬುದು ಉಲ್ಲೇಖಾರ್ಹ ಸಂಗತಿಯಾಗಿದೆ. ಇನ್ನು, ಮುಖ್ಯವಾದ ಸಂಗತಿ ಎಂದರೆ ಜಗತ್ತಿನ ಒಟ್ಟು ಸಾಹಿತ್ಯೇತಿಹಾಸದಲ್ಲಿ ಕನ್ನಡಕ್ಕೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟ 'ವಚನ'ವೆಂಬ ವಿನೂತನ ಸಾಹಿತ್ಯ ಪ್ರಕಾರ ಕೂಡ ಜನಿಸಿ ಬಂದದ್ದು ಇದೇ ಪರಿಸರದಿಂದ ಎಂಬುದು ಅತ್ಯಂತ ಹೆಮ್ಮೆಯ ಹಾಗೂ ಗಮನಾರ್ಹ ಸಂಗತಿಯಾಗಿದೆ.

ಈ ಪರಿಸರದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅವಲೋಕಿಸುವುದಾದರೆ ಹಿಂದೂ, ವೀರಶೈವ-ಲಿಂಗಾಯತ, ಬೌದ್ಧ, ಜೈನ ಮತ್ತು ಇಸ್ಲಾಂ ಸೇರಿದಂತೆ ವಿವಿಧ ಧರ್ಮಗಳ ವಿಭಿನ್ನ ಸಂಸ್ಕೃತಿಯ ಸಾಮರಸ್ಯದ ಸಂಗಮವಾಗಿದೆ. ಹೀಗೆ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೊಂದಿರುವ ಕಲಬುರಗಿ ಪರಿಸರದ ಶೈಕ್ಷಣಿಕ ಪರಂಪರೆಯನ್ನು ಅವಲೋಕಿಸುವುದಾದರೆ ಅದುವೂ ಶ್ರೀಮಂತವಾದುದೇ. ಈ ಮೇಲೆ ಉದ್ಧೃತವಾದ ಗ್ರಂಥಗಳು ಹಾಗೂ ವಚನವೆಂಬ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ನೀಡಿದ ಈ ನೆಲದ ಸಂಸ್ಕಾರ ವಿದ್ಯೆಗೆ ಮಹತ್ವ ನೀಡದೇ ಹೋಗಿರಲು ಸಾಧ್ಯವೇ ಇಲ್ಲ. ಶಿಕ್ಷಣಕ್ಕೆ ಅತ್ಯಂತ ಮಹತ್ವದ ಸ್ಥಾನ ನೀಡಿರಲಿಕ್ಕೇಬೇಕು. ಕವಿರಾಜಮಾರ್ಗಕಾರ ಒಂದೆಡೆ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್' ಎಂದು ಹೇಳಿರುವ ಪ್ರಸಿದ್ಧವಾದ ವರ್ಣನಪರ ಸಾಲುಗಳನ್ನು ಅವಲೋಕಿಸುವುದಾದರೆ, ಅಂತಹ ಜಾಣರ ನಾಡಿನ ಶೈಕ್ಷಣಿಕ ಪರಂಪರೆ ಸಹ ಶ್ರೀಮಂತವಾದುದಾಗಿಯೇ ಇರುವಲ್ಲಿ ಅನುಮಾನವಿಲ್ಲ. ಹೀಗಲ್ಲದೆ ಅಷ್ಟೊಂದು ಧೈರ್ಯ ವಿಶ್ವಾಸಗಳಿಂದ ಕವಿ ಶ್ರೀವಿಜಯ ಈ ರೀತಿ ಹೇಳಿರುತ್ತಿದ್ದನೇ?.

ಇಂತಹ ಉಚ್ಚ ಪರಂಪರೆಯನ್ನು ಹೊಂದಿರುವ ಕಲಬುರಗಿ ಪರಿಸರದ ಶೈಕ್ಷಣಿಕ ಪರಂಪರೆಯನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ಅವಲೋಕಿಸುವುದು ಅತ್ಯಂತ ಸೂಕ್ತವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಈ ಕೆಳಗಿನಂತೆ ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ಪ್ರಾಚೀನ ಪರಂಪರೆ ಮತ್ತು

೨. ಆರ್ವಾಚೀನ ಪರಂಪರೆ

೧) ಪ್ರಾಚೀನ ಪರಂಪರೆ :

ಕಲಬುರಗಿಯ ಒಟ್ಟು ಪರಿಸರವು ಶತಶತಮಾನಗಳಿಂದ ಒಂದು ಪ್ರಸಿದ್ಧ ವಿದ್ಯಾಕೇಂದ್ರವಾಗಿರುವುದು ಚರಿತ್ರೆಯಿಂದ ಗೊತ್ತಾಗುತ್ತದೆ. ಬೌದ್ಧ ಧರ್ಮದ ನೆಲೆಯಾಗಿದ್ದ ಈ ಪರಿಸರದಲ್ಲಿ ಆ ಧರ್ಮದ ವಿದ್ಯಾಕೇಂದ್ರಗಳಿದ್ದುದು ಪ್ರಸಿದ್ಧ ವಿಚಾರವೇ ಆಗಿದೆ. ಆ ಪ್ರಸಿದ್ಧ ವಿದ್ಯಾ ಕೇಂದ್ರಗಳೆಂದರೆ ನಾಗಾವಿ ಹಾಗೂ ಸನ್ನತಿ. ಅವುಗಳ ಕುರಿತಾದ ಶೈಕ್ಷಣಿಕ ವಿವರಗಳನ್ನು ಸಂಕ್ಷಿಪ್ತವಾಗಿ ಹೀಗೆ ಉದ್ಧೃತಗೊಳಿಸಬಹುದು.

**ಸನ್ನತ್ತಿ :**

ಸನ್ನತ್ತಿಯು ಈಗಿನ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿರುವ ಒಂದು ಪುಟ್ಟಗ್ರಾಮ. 'ಸನ್ನತ್ತಿಯು ಕ್ರಿಸ್ತಶಕದ ಮೊದಲ ಅಥವಾ ಎರಡನೆಯ ಶತಕದಲ್ಲಿ ಬೆಳವಣಿಗೆಗೊಂಡ ಬೌದ್ಧಕೇಂದ್ರ'. ಆಗ ಕರ್ನಾಟಕದಲ್ಲಿ ಇದ್ದ ಬೌದ್ಧ ಕೇಂದ್ರಗಳು ಎರಡೇ. ಒಂದು ಸನ್ನತ್ತಿ ಇನ್ನೊಂದು ಬನವಾಸಿ.

**ನಾಗಾವಿ :**

ನಾಗಾವಿ ವಿಶ್ವವಿದ್ಯಾಲಯವು ಪ್ರಾಚೀನ ಶೈಕ್ಷಣಿಕ ಕೇಂದ್ರ, ಅಗ್ರಹಾರ. ಶೈಕ್ಷಣಿಕ ಕ್ಷೇತ್ರದ 'ದಕ್ಷಿಣದ ತಕ್ಷಶಿಲೆ' ಎಂದೇ ಖ್ಯಾತಿ ಪಡೆದಿರುವ ಕಲಬುರಗಿ ಜಿಲ್ಲೆಯ ನಾಗಾವಿ ಮಳಖೇಡದ ರಾಷ್ಟ್ರಕೂಟರ ಮೂರನೆಯ ಕೃಷ್ಣನ ಆಳ್ವಿಕೆಯಲ್ಲಿ (ಕ್ರಿ.ಶ.೯೨೯- ೯೭೦) ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಶಿಕ್ಷಣ ಕೇಂದ್ರ ಎಷ್ಟು ಪ್ರಸಿದ್ಧವಾಗಿತ್ತೆಂದರೆ 'ನಾಗಾಯಿ ಘಟಿಕಾಸ್ಥಳ' ಎಂದು ಒಂದು ವಿಶ್ವವಿದ್ಯಾಲಯದ ಸ್ಥಾನಪಡೆದಿತ್ತು.

ಜೈನ ಧರ್ಮವನ್ನು ಕುರಿತಂತೆ ನೋಡುವುದಾದರೆ ಜೈನ ಜನಪದ ಸಾಹಿತ್ಯದಲ್ಲಿ ಉಲ್ಲೇಖವಾದ 'ಹರಸೂರು' ಎಂಬ ಗ್ರಾಮವು ಜೈನರ ಸುಪ್ರಸಿದ್ಧ ವಿದ್ಯಾಕೇಂದ್ರ (ಅಗ್ರಹಾರ) ವೂ, ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲದ ಸುಪ್ರಸಿದ್ಧ ವ್ಯಾಪಾರಕೇಂದ್ರವೂ ಆಗಿದ್ದುದು ತಿಳಿದುಬರುತ್ತದೆ. ಹರಸೂರು ಎಂಬುದರ ಶಾಸನೋಕ್ತ ಹೆಸರು 'ಶಾಲೆಯ ಸೀಮಳ' ಹಾಗೂ 'ಶ್ರೀಕರ ಪುರ' ಎಂಬುವುಗಳಾಗಿವೆ.

ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಾನ್ಯಖೇಟ (ಮಳಖೇಡ) ವು ದೊಡ್ಡ ವಿದ್ಯಾಕೇಂದ್ರ ಹಾಗೂ ಘಟಿಕಾ ಸ್ಥಾನವಾಗಿತ್ತು. ಹಾಗೆಯೇ ಕಲಬುರಗಿ ತಾಲೂಕಿನ 'ಹುಣಸಿ ಹಡಗಲಿ' ಗ್ರಾಮವು ಒಂದು ಘಟಿಕಾಸ್ಥಾನದ ವಿದ್ಯಾಕೇಂದ್ರವಾಗಿತ್ತೆಂದು ಅಲ್ಲಿನ ಕ್ರಿ.ಶ. ೧೦೯೮ ರ ಕಲ್ಯಾಣಿ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಶಾಸನ ವಿಶದಪಡಿಸುತ್ತದೆ.

ಹುಣಸಿ ಹಡಗಲಿಯಲ್ಲಿ ಮೂರು ಜೈನ ಬಸದಿಗಳಿದ್ದವೆಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಬಸದಿಯಲ್ಲಿ ಘಟಿಕಾಸ್ಥಾನ ಇರುವಲ್ಲಿ ಪಾಠಶಾಲೆ ಇರುತ್ತಿತ್ತು. ಇಲ್ಲಿಯೇ ವಿದ್ಯಾರ್ಥಿಗಳಿಗೆ ಪಾಠ- ಪ್ರವಚನಗಳು ನಡೆಯುತ್ತಿದ್ದವು.

ಸುರಪುರ ತಾಲೂಕಿನ ಹಗರಟಗಿ, ಕೆಂಭಾವಿ, ಏವೂರು, ಸೇಡಂ, ಹರಸೂರು, ಕುಳಗೇರಿ, ಆಳಂದ, ಪೇಠಶಿರೂರ, ಚಿತ್ತಾಪುರ, ಅಲ್ಲೂರು, ಗೌಂಹಾರ ಇನ್ನಿತರ ಕಡೆ ಜೈನ ಅಗ್ರಹಾರಗಳಿದ್ದುದಾಗಿ ತಿಳಿದುಬರುತ್ತದೆ. ಇನ್ನು, ಸರಸ್ವತಿ ಮಂಟಪ, ಸರಸ್ವತಿ ಮಂದಿರವೆಂದು ಕರೆಯಿಸಿಕೊಳ್ಳುತ್ತಿದ್ದ ಸರಸ್ವತಿ ಪ್ರತಿಮೆಯ ಕಿರೀಟ ಮಧ್ಯಭಾಗದಲ್ಲಿರುವ ಕಿರು ಜಿನಬಿಂಬಗಳೇ ಇದಕ್ಕೆ ಸಾಕ್ಷಿ. ಇಂತಹ ಸರಸ್ವತಿ ಮೂರ್ತಿಗಳು ಆಳಂದ ತಾಲೂಕಿನ ತಡಕಲ್ಲು, ಚಿತ್ತಾಪುರ ತಾಲೂಕಿನ ಚಿತ್ತಾಪುರ, ಚಿಂಚೋಳಿ ತಾಲೂಕಿನ ಸುಲೇಪೇಟ (ಸುಲೇಪೇಟದ ಶಾಸನೋಕ್ತ ಹೆಸರು ಸುಲ್ಲಿಗ್ರಾಮ) ಇನ್ನಿತರ ಕಡೆಗಳಲ್ಲಿವೆ.

ಜೇವರ್ಗಿ ತಾಲೂಕಿನ ನಗರದಲ್ಲಿರುವ ಊರ ಮಧ್ಯದ ಬಯಲು ಚಾವಡಿಯನ್ನು ಜನ 'ಸರಸ್ವತಿ ಮಂಟಪ' ಎಂದು ಕರೆಯುವುದು ಉಲ್ಲೇಖಾರ್ಹ ಸಂಗತಿಯು. ಇಲ್ಲಿರುವ ಧವಣೇಂದ್ರ- ಪದ್ಮಾವತಿಯರ ಪ್ರತಿಮೆಗಳ ಕಿರೀಟಗಳ ಮಧ್ಯದಲ್ಲಿ ಕಿರು ಜಿನ ಬಿಂಬಗಳಿರುವುದರಿಂದ ಇದೂ ಸಹ 'ಜೈನರ ವಿದ್ಯಾಕೇಂದ್ರ'ವೇ ಆಗಿತ್ತು ಎಂದು ಊಹಿಸಲಡ್ಡಿಯಿಲ್ಲ.

ಕಲ್ಯಾಣಿ ಚಾಲುಕ್ಯದೊರೆ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ರಾಣಿ ಸೋಮಲದೇವಿಯು 'ಆಲಂದೆ ಸಾಸಿರ'ವನ್ನಾಳುತ್ತಿದ್ದಾಗ ಆಕೆಯ ಮನೆವೆರ್ಗ್ಗಡೆ ದುರ್ಗಸಿಂಹನು ಚಿತ್ತಾಪುರ ತಾಲೂಕಿನ ನಿಪ್ಪಾಣಿ (ಈ ಹಿಂದೆ ಇದಕ್ಕೆ ಸುಪ್ಪಾಣಿ ಎಂದು ಕರೆಯಲಾಗುತ್ತಿತ್ತು, ಸು+ಪಾಣಿ=ಸುಪಾಣಿ ಎಂದರೆ ಸಮೃದ್ಧವಾದ ಶುದ್ಧವಾದ ಜಲಪ್ರದೇಶ)ಯಲ್ಲಿ 'ಸರಸ್ವತಿ ಮಂಟಪ' ಕಟ್ಟಿಸಿ ೩೨ ಮತ್ತರು ಹೊಲವನ್ನು, ೨ ಮತ್ತರು ತೋಟವನ್ನು ಪೂಜೆ ಹಾಗೂ ವಿದ್ಯಾರ್ಥಿಗಳ ಊಟ-ವಸತಿಗಾಗಿ ದಾನ ನೀಡಿರುವುದನ್ನು ಅಲ್ಲಿನ ಕ್ರಿ.ಶ.೬.೪.೧೬೫೩ರ ಶಾಸನ ದೃಢಪಡಿಸುತ್ತದೆ. ಇದೂ ಕೂಡ ಜೈನ ವಿದ್ಯಾಕೇಂದ್ರವಾಗಿದ್ದಿರಬಹುದೆಂದು ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಹಿಂದೆ ಉಲ್ಲೇಖಿತವಾದ ಹರಸೂರಿನಲ್ಲಿ ಧಾರ್ಮಿಕ ಶಿಕ್ಷಣದೊಂದಿಗೆ ಶಿಕ್ಷಣಕ್ಕೂ ಆದ್ಯತೆ ನೀಡಲಾಗುತ್ತಿತ್ತು. ಜೈನ ಮಂದಿರ ಪಾಠಶಾಲೆಗಳಲ್ಲಿ ಜ್ಯೋತಿಷ್ಯ, ಗಣಿತ, ಹಸ್ತಸಾಮುದ್ರಿಕ, ಶಕುನ, ಆಯುರ್ವೇದ, ಪೂಜಾ ಮಂತ್ರ, ವಾಸ್ತುಶಿಲ್ಪ, ಸಂಗೀತ, ಶಸ್ತ್ರಶಾಸ್ತ್ರ, ಗಜವಿದ್ಯೆ ಮತ್ತು ವ್ಯಾಕರಣಾದಿ ವಿಷಯಗಳನ್ನು ಅಲ್ಲಿ ಕಲಿಸಲಾಗುತ್ತಿತ್ತು.

ಇನ್ನು, ಇಸ್ಲಾಂ ಧರ್ಮವನ್ನು ಕುರಿತಂತೆ ನೋಡುವುದಾದರೆ, ಮಹಮ್ಮದ್ ಗವಾನನ ಆಳ್ವಿಕೆಯ ಕಾಲ (ಹದಿನಾಲ್ಕನೇ ಶತಮಾನ) ಕ್ಕೆ ಶಿಕ್ಷಣಕ್ಕೆ ಮಹತ್ವದ ಸ್ಥಾನ ನೀಡಲಾಗಿತ್ತು. ಗ್ರಂಥಾಲಯವನ್ನು ನಿರ್ಮಾಣ ಮಾಡಿಸಿದ್ದಲ್ಲದೆ ವಿದ್ಯಾರ್ಥಿಗಳಿಗಾಗಿ ಮತ್ತು ಶಿಕ್ಷಕರಿಗಾಗಿ ೩೬ ಪ್ರತ್ಯೇಕ ಕೊಠಡಿಗಳ ವಸತಿಗೃಹವನ್ನು ನಿರ್ಮಾಣ ಮಾಡಿಸಲಾಗಿತ್ತು. ಖಾನ್‌ಕಾಜ್ ಮತ್ತು ಮಕ್ತಬ್ ಎಂಬ ಎರಡು ವಿಧದ ಶಿಕ್ಷಣ ಪದ್ಧತಿ ಜಾರಿಯಲ್ಲಿತ್ತು. ಖಾನ್‌ಕಾಜ್‌ದಲ್ಲಿ ಬರಿ ಧಾರ್ಮಿಕ ಶಿಕ್ಷಣ ನೀಡಲಾಗುತ್ತಿತ್ತು ಮತ್ತು ಮಕ್ತಬ್‌ನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ನೀಡಲಾಗುತ್ತಿತ್ತು. ಜೊತೆಗೆ, ಇಲ್ಲಿ ಧರ್ಮ ಹಾಗೂ ಭಾಷೆಯ ಅಧ್ಯಯನ ಸಹ ನಡೆಯುತ್ತಿತ್ತು. ಮಹಮ್ಮದ್ ಗವಾನನನ್ನು 'ಶ್ರೇಷ್ಠ ವಿದ್ಯಾಪೋಷಕ' ಎಂದು ವರ್ಣಿಸಿರುವ ಹಾಗೆ ಇತಿಹಾಸದಿಂದ ನಮಗೆ ತಿಳಿದು ಬರುತ್ತದೆ. ಈ ರೀತಿ ಇಸ್ಲಾಂ ಧರ್ಮೀಯರ ಆಳ್ವಿಕೆಯ ಕಾಲದ ಶಿಕ್ಷಣ ಪದ್ಧತಿ ಹಾಗೂ ಸ್ಥಿತಿಗತಿಗಳನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಬಹುದು.

ಹೀಗೆ ಕಲಬುರಗಿ ಪರಿಸರದ ಪ್ರಾಚೀನ ಶೈಕ್ಷಣಿಕ ಪರಂಪರೆಯು ಬೌದ್ಧ-ಜೈನ ಧರ್ಮಗಳ ಕೊಡುಗೆಗಳಿಂದಾಗಿ ಅತ್ಯಂತ ಶ್ರೀಮಂತವಾದುದಾಗಿ ನಿಲ್ಲುತ್ತದೆ.

**೨. ಆರ್ವಾಚೀನ ಪರಂಪರೆ :**

ಬೌದ್ಧ ಜೈನಾದಿ ಮತಗಳ ಕಾಲದ ಶ್ರೀಮಂತ ಶೈಕ್ಷಣಿಕ ಪರಂಪರೆಯು ಆ ಮತಗಳ ಅವನತಿ (ಶಿಥಿಲತೆ) ಯ ಕಾಲಾನಂತರದಲ್ಲಿ ಅದುವೂ ಸಹ ನಶಿಸಿ ಹೋಯಿತೆನ್ನಬಹುದು. ೧೧ ಹಾಗೂ ೧೨ನೇ ಶತಮಾನಗಳವರೆಗಿದ್ದ ಆ ಶ್ರೀಮಂತಿಕೆ ಮುಂದೆ ಉಳಿಯಲಿಲ್ಲ. ಆನಂತರದ ಪರಂಪರೆಯ ಇತಿಹಾಸ ಮಸುಕು ಮಸುಕೇ; ಅಷ್ಟೊಂದು ಹೆಮ್ಮೆಯಿಂದ ಹೇಳಿಕೊಳ್ಳುವಷ್ಟು ಶ್ರೀಮಂತವಲ್ಲ.

ಕಲಬುರಗಿ ಪರಿಸರದ ಶೈಕ್ಷಣಿಕ ಪರಂಪರೆ ಮತ್ತೆ ಪುಟಿದೆದ್ದುದು ಕ್ರಿ.ಶ. ೨೦ನೇ ಶತಮಾನದ ಮೊದಲ ದಶಕದಲ್ಲಿಯೇ (೧೯೦೩) ಸುಮಾರು ೧೩ನೆಯ ಶತಮಾನದಲ್ಲಿ ನೆಲಕಚ್ಚಿದ್ದ ಅದು ೮ ಶತಮಾನಗಳ ಕಾಲ ಮೇಲೇಳಲೇ ಇಲ್ಲ.

ಈ ಹೊತ್ತಿಗಾಗಲೇ ಈ ಪರಿಸರವಾಗಲೀ, ಇಲ್ಲಿನ ಸ್ಥಳೀಯ ಭಾಷೆಯಾಗಲೀ, ಯಾವುದೂ ಈ ಮೂಲದ ರೂಪದಲ್ಲಿರಲಿಲ್ಲ. ಇನ್ನು, ನಿರ್ದಿಷ್ಟವಾಗಿ ಭಾಷೆಯ ಕುರಿತಾಗಿ ಹೇಳುವುದಾದರೆ ಕನ್ನಡಭಾಷೆ ತುಂಬಾ ಸಂಕೀರ್ಣ ಪರಿಸ್ಥಿತಿಯಲ್ಲಿತ್ತು. ಒಂದೆಡೆ ಉರ್ದುಪರ್ಶಿಯನ್ ಭಾಷೆಗಳ ಪ್ರಭಾವ, ಇನ್ನೊಂದೆಡೆ ಮರಾಠಿ ಭಾಷೆಯ ಪ್ರಭಾವ, ಮತ್ತೊಂದೆಡೆ ತೆಲುಗು ಭಾಷೆಯ ಪ್ರಭಾವ. ಹೀಗೆ ಎಲ್ಲಾ ದಿಕ್ಕುಗಳಿಂದ ದಾಳಿಯನ್ನನುಭವಿಸಿದ ಕನ್ನಡ ಭಾಷೆ ಅಕ್ಷರಶಃ ದಿಕ್ಕುತೋಚದಂತಾಗಿತ್ತು. ಇಂತಹ ಸಂದರ್ಭದಲ್ಲಿ ಜನರಿಗೆ ಶಿಕ್ಷಣ ನೀಡುವುದು (ಜನರು ಪಡೆಯುವುದು) ತುಂಬಾ ದೂರದ ಮಾತಾಗಿತ್ತು. ಮಹಿಳೆಯರ ಶಿಕ್ಷಣದ ಮಾತಂತೂ ಕನಸಿನ ಮಾತೇ ಸರಿ.

ಕನ್ನಡ ಭಾಷೆ ಮತ್ತು ಮಹಿಳೆಯರ ಶಿಕ್ಷಣ ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿದ್ದ ಕಾಲದಲ್ಲಿ ಅಚ್ಚರಿ ಎನಿಸುವ ಹಾಗೆ, ಮರುಭೂಮಿಯಿಂದ ಚಿಲುಮೆಯೊಂದು ಪುಟಿದೆದ್ದು ಬರುವಂತೆ 'ಕನ್ನಡದ ಶಾಲೆ'ಯೊಂದರ ಮತ್ತು ಒಂದು ಬೃಹತ್ ವೃಕ್ಷವಾಗಿ ಬೆಳೆದು ಸಾವಿರಾರು ಜನರಿಗೆ ಅನ್ನ ನೆರಳು ನೀಡುತ್ತಿರುವ, ಲಕ್ಷಾಂತರ ವಿದ್ಯಾರ್ಥಿಗಳ ಬಾಳು ಬೆಳಗುತ್ತಿರುವ 'ವಿದ್ಯಾವರ್ಧಕ ಸಂಘ' ವೊಂದರ ಉದಯವಾಯಿತು. ಆ ಕನ್ನಡದ ಶಾಲೆ ಬೇರಾವುದೋ ಅಲ್ಲ. ಇದುವೇ 'ಶ್ರೀ ಶರಣ ಬಸವೇಶ್ವರ ಸಂಸ್ಥಾನ'ದ ಮಹಾದಾಸೋಹ ಮನೆಯ ಮೇಲಿನ ಮಹಡಿಯಲ್ಲಿ ಆರಂಭವಾದ ಶಾಲೆ, ವಿದ್ಯಾವರ್ಧಕ ಸಂಘವೂ ಬೇರಿನ್ನಾವುದೋ ಅಲ್ಲ. ಅದುವೆ 'ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘ'. ಇನ್ನು ಈ ಕನ್ನಡ ಶಾಲೆ ಹಾಗೂ ವಿದ್ಯಾವರ್ಧಕ ಸಂಘಗಳ ಸಂಸ್ಥಾಪಕರು ಶರಣಬಸವೇಶ್ವರ ಮಹಾದಾಸೋಹ ಸಂಸ್ಥಾನದ ಆರನೆಯ ಪೀಠಾಧಿಪತಿಗಳಾಗಿ ಹೋದ 'ಪರಮಪೂಜ್ಯ ಶ್ರೀ ಮೂರನೆಯ ಶರಣಬಸವಪ್ಪ ಅಪ್ಪ' ಅವರು. ಹೀಗೆ, ಕ್ರಿ.ಶ. ೧೯೦೩ರಲ್ಲಿಯೇ ಪರಮಪೂಜ್ಯರು ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದರು.

ಇಲ್ಲಿಂದ ಕಲಬುರ್ಗಿ ಪರಿಸರದ ಆರ್ವಾಚೀನ ಶೈಕ್ಷಣಿಕ ಪರಂಪರೆ ಪ್ರಾರಂಭವಾಗುತ್ತದೆ. ಪ್ರಾಚೀನ ಪರಂಪರೆಗಿಂತ ಆರ್ವಾಚೀನ ಪರಂಪರೆಯು ಬೃಹತ್ ಗಾತ್ರದಲ್ಲಿರುವುದರಿಂದ ಅದನ್ನು ಪ್ರತ್ಯೇಕವಾಗಿ ಒಂದೊಂದು ಶಿಕ್ಷಣ ಸಂಸ್ಥೆಗಳ ಕುರಿತಂತೆ ವಿವರವಾಗಿ ನೀಡುವುದಾಗಿ ಕಷ್ಟದಾಯಕವಾದ ಕಾರ್ಯ, ನೂರಾರು ಸಂಸ್ಥೆಗಳು ಇಂದು ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ಪ್ರಮುಖ ಸಂಸ್ಥೆಗಳ ಕುರಿತಾಗಿ ಸಂಕ್ಷಿಪ್ತ ಮಾಹಿತಿ ಒದಗಿಸಿ ಉಳಿದ ಸಂಸ್ಥೆಗಳ ಪಟ್ಟಿಯನ್ನು ಕೊನೆಯಲ್ಲಿ ನೀಡಲಾಗುತ್ತದೆ.

**೧. ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘ :**

ಮೂರನೆಯ ಶರಣಬಸವಪ್ಪ ಅಪ್ಪಾ ಅವರು ತಮ್ಮ ಜೀವಿತದ ಕೊನೆಯ ಕಾಲದಲ್ಲಿ ಹುಟ್ಟುಹಾಕಿದ್ದ 'ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘ'ವು ಪ್ರಪ್ರಥಮದಲ್ಲಿ ಪ್ರಾರಂಭಿಸಿದ್ದ ಕನ್ನಡ ಶಾಲೆಯೊಂದರ ಮುಖಾಂತರ ಸುಮಾರು ೧೫ ವರ್ಷಗಳ ಕಾಲ ಸುಸೂತ್ರವಾಗಿ ಮುನ್ನಡೆದು ಹೋಗುತ್ತಿರುವ ಕಾಲಕ್ಕೆ ಅದನ್ನು ಸಂಘ ಸ್ಥಾಪನೆಯಾದ ವರ್ಷದಲ್ಲಿಯೇ ಪೀಠಾರೋಹಣ ಮಾಡಿ ಏಳನೆಯ ಪೀಠಾಧಿಪತಿಗಳಾಗಿ ಬಂದಿದ್ದ ಪರಮಪೂಜ್ಯ ದೊಡ್ಡಪ್ಪ ಅಪ್ಪ ಅವರು ಅಧಿಕೃತವಾಗಿ ನೋಂದಣಿ ಮಾಡಿಸಿದರು ಈ ಮೂಲಕ ಜ್ಞಾನದಾಸೋಹಕ್ಕೆ ಬಲವಾದ ಅಸ್ತಿಭಾರ ಹಾಕಿದರು. ಸಾರ್ವಜನಿಕ ಗ್ರಂಥಾಲಯವನ್ನು ತೆರೆದು ಅದರ ಮೂಲಕ ಶಿಕ್ಷಣದ ಬೆಳಕು ಜನಾಂಗದಲ್ಲಿ ಬೆಳಗುವಂತೆ ಮಾಡಿದರು. ರವಿವಾರ, ಶುಕ್ರವಾರಗಳಂದು ನೀಡುತ್ತಿದ್ದರಜಾ ದಿನಗಳನ್ನು (ವಾರದ ರಜೆ) ಬದಲಿಸಿ ರೈತಾಪಿ ವರ್ಗದ ಜನಪದ ರಜೆಯಾದ ಸೋಮವಾರವನ್ನು ನಿಜವಾದ ಭಾರತೀಯ ರಜೆಯೆಂದು ಕ್ರಿ.ಶ. ೧೯೧೮ರಲ್ಲಿಯೇ ಜಾರಿಗೆ ತಂದರು. ಮುಂದೆ ಮಹಿಳೆಯರ ಸಾಕ್ಷರತೆಗೋಸ್ಕರ ೧೯೩೪ರಲ್ಲಿ ಹೆಣ್ಣುಮಕ್ಕಳ ಕನ್ನಡ ಶಾಲೆಯನ್ನು ತೆರೆದರು. ತುಂಗಾಡಮಣಿಗಳನ್ನು ಕಳುಹಿಸಿಕೊಟ್ಟು ವಿದ್ಯಾರ್ಥಿನಿಯರನ್ನು ಕರೆತರುವ ವ್ಯವಸ್ಥೆ ಮಾಡಿ ಅವರಿಗೆಲ್ಲ ಉಚಿತ ಶಿಕ್ಷಣ ನೀಡಿದರು.

೧೯೦೩ ರಿಂದ ಹಂತ ಹಂತವಾಗಿ ಬೆಳೆದು ಬಂದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವು ದೊಡ್ಡಪ್ಪ ಅಪ್ಪ ಅವರ ಒಟ್ಟು ಅಧಿಕಾರ ಕಾಲದಲ್ಲಿ ವಿಶಾಲವಾಗಿ ಬೆಳೆಯಿತು. ಮುಂದೆ ಅವರ ಕಾಲಾನಂತರದಲ್ಲಿ ಪಟ್ಟಕ್ಕೆ ಬಂದವರೇ ಪರಮಪೂಜ್ಯ ಡಾ. ಶರಣ ಬಸವಪ್ಪ ಅಪ್ಪಾ ಅವರು. ಸಂಸ್ಥಾನದ ಎಂಟನೆಯ ಪೀಠಾಧಿಪತಿಗಳಾದ ಪೂಜ್ಯರು ಈಗ ಸಂಸ್ಥೆಯನ್ನು ಉತ್ಯಂತ ಉತ್ತುಂಗಕ್ಕೇರಿಸಿದ್ದಾರೆ. ಶಿಕ್ಷಣ ಸಮುಚ್ಛಯವು ಸುಮಾರು ೬೦ಕ್ಕೂ ಹೆಚ್ಚು ವಿದ್ಯಾ ಕೇಂದ್ರಗಳನ್ನು ಹೊಂದಿದೆ. ಸಂಸ್ಥೆಯು ಈಗ ಜಾಗತಿಕ ಜ್ಞಾನ ದಾಸೋಹದತ್ತ ನಡೆದು ಬರಲು 'ಡಾ. ಅಪ್ಪಾ ಅವರು ಸವೆಸಿದ ದಾರಿ ಅದೊಂದು ಯೋಧನ ವಿಜಯದ ದಾರಿಯೇ ಸರಿ'. ಆ ವಿಜಯದ ಪ್ರತೀಕವೇ 'ಶರಣಬಸವ ವಿಶ್ವವಿದ್ಯಾಲಯ'ವು ೨೦೧೩ರಲ್ಲಿ ಸ್ಥಾಪನೆಯಾಗಿ, ೨೦೧೭ರಿಂದ ಕಾರ್ಯನಿರ್ವಹಿಸುತ್ತಿದೆ.

**೨. ನೂತನ ವಿದ್ಯಾಲಯ ಸಂಸ್ಥೆ :**

ಈ ಸಂಸ್ಥೆಯನ್ನು ಶ್ರೀಯುತರಾದ ವಿ.ಪಿ. ದೇವಳಗಾಂವಕರ ಅವರು ೧೯೦೭ರಲ್ಲಿಯೇ ಪ್ರಾರಂಭಿಸಿದರು. ಈ ಶಿಕ್ಷಣ ಸಮುಚ್ಚದ ಅಡಿಯಲ್ಲಿ ೧ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಶಾಲಾ ಶಿಕ್ಷಣ, ಪೊಲಿಟೆಕ್ನಿಕ್, ಪದವಿಪೂರ್ವ, ಪದವಿ, ಬಿ.ಇಡಿ, ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಸಂಗೀತ( Music)) ಮತ್ತು ವಾಣಿಜ್ಯ ವಿಭಾಗ (Commerce) ಗಳು ಕಾರ್ಯ ನಿರ್ವಹಿಸುತ್ತಿವೆ. ಶ್ರೀಮಾನ್ ಜಗನ್ನಾಥರಾವ್ ಚಂಡರಕಿ ಅವರ ಕೊಡುಗೆ ಅಪಾರವಾದುದಾಗಿದೆ.

**೩. ಗುಲಬರ್ಗಾ ವಿಶ್ವವಿದ್ಯಾಲಯ :**

ಧಾರವಾಡ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರವೇ ಮುಂದೆ ಪ್ರತ್ಯೇಕ ವಿಶ್ವವಿದ್ಯಾಲಯವಾಗಿ ಪ್ರಾರಂಭಗೊಂಡಿತ್ತು. ೧೯೮೦ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಅಧಿಕೃತವಾಗಿ ಸ್ಥಾಪನೆಯಾಯಿತು. ಇದರ ಮೊದಲ ಕುಲಪತಿಗಳು ನಾಗರಾಜ ಎಂಬುವವರಾಗಿದ್ದರು. ಇಂದು ವಿಶ್ವವಿದ್ಯಾಲಯವು ಸುಮಾರು ೩೦ಕ್ಕೂ ಹೆಚ್ಚು ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಹೊಂದಿ ಬೃಹತ್ ಗಾತ್ರದಲ್ಲಿ

ಬೆಳೆದುನಿಂತಿದೆ. ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳು ಸ್ನಾತಕೋತ್ತರ, ಸಂಶೋಧನ ಅಧ್ಯಯನವನ್ನು ಮಾಡುತ್ತಿದ್ದಾರೆ. ಸುಮಾರು ಮುನ್ನೂರ ಐವತ್ತಕ್ಕೂ ಹೆಚ್ಚು ಕಾಲೇಜುಗಳು ಸಂಲಗ್ನತೆ ಹೊಂದಿವೆ. ಕಲಾ, ವಾಣಿಜ್ಯ, ಸಂಗೀತ, ಸಾಮಾಜಿಕ ವಿಜ್ಞಾನ, ತಂತ್ರಜ್ಞಾನ, ವಿಜ್ಞಾನ, ಶಿಕ್ಷಣ ಮತ್ತು ಕಾನೂನು ಕ್ಷೇತ್ರಗಳಲ್ಲಿ ಕೋರ್ಸ್ಗಳು ನಡೆಯುತ್ತಿವೆ.

**೪. ಇತರ ಶಿಕ್ಷಣ ಸಂಸ್ಥೆಗಳು :**

ಗುಲಬರ್ಗಾ ನಗರ, ತಾಲೂಕು, ಜಿಲ್ಲೆ ಸೇರಿದಂತೆ ಸುತ್ತೆಡೆ ನೂರಾರು ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಕೆಲವೇ ಕೆಲವು ಪ್ರಮುಖ ಶಿಕ್ಷಣ ಸಂಸ್ಥೆ ಹಾಗೂ ವಿಶ್ವವಿದ್ಯಾಲಯಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

ಕೇಂದ್ರೀಯ ವಿಶ್ವವಿದ್ಯಾಲಯ ಕಡಗಂಚಿ-ಕಲಬುರಗಿ, ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ, ಖಾಜಾ ಬಂದೇನವಾಜ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯ, ವಿಜಯ ವಿದ್ಯಾಲಯ, ಇ.ಎಸ್.ಐ. ಆಸ್ಪತ್ರೆ ಕಾಲೇಜುಗಳ ಸಮುಚ್ಛಯ, ಸೆಂಟ್ ಮೇರಿ, ವಿವೇಕಾನಂದ ವಿದ್ಯಾನಿಕೇತನ, ಚಂದ್ರಕಾಂತ ಪಾಟೀಲ, ಪ್ರೌಢದೇವರಾಯ, ಕೇಂಬ್ರಿಜ್, ಮೆಹತಾ, ಜೋಸೆಫ್ ಕಾನ್ವೆಂಟ್ ಮುಂತಾದ ಮಹಾವಿದ್ಯಾಲಯಗಳು/ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಇದು ಸುದೀರ್ಘ, ಶ್ರೀಮಂತ ಹಾಗೂ ಅಷ್ಟೇ ವಿಶಾಲವಾದ ಹರವನ್ನು ಹೊಂದಿರುವ ಕಲಬುರಗಿ ಪರಿಸರದ ಪ್ರಾಚೀನ ಹಾಗೂ ಅರ್ವಾಚೀನ ಶೈಕ್ಷಣಿಕ ಪರಂಪರೆಯ ಅತ್ಯಂತ ಸಂಕ್ಷಿಪ್ತ ಪರಿಚಯವಾಗಿದೆ.

**ಅಡಿ ಟಿಪ್ಪಣಿಗಳು:**

೧. ಕರ್ನಾಟಕ ಸಂಸ್ಕೃತಿಗೆ ರಾಷ್ಟ್ರಕೂಟರ ಕೊಡುಗೆ, ಮುಡಬಿ ಗುಂಡೇರಾವ್ ಸೇಡಂ, ಕವಿಜನ ಮಾರ್ಗ, ಪುಟ: ೭೩.

೨. ಭರತವರ್ಷ ಮತ್ತು ಮಿತಾಕ್ಷರ, ಶ್ರೀನಿವಾಸ ಸಿರನೂರಕರ್, ಕವಿಜನಮಾರ್ಗ, ಪುಟ: ೭೬.

೩. ವಚನ ಸಾಹಿತ್ಯ, ಡಾ. ಎಂ. ಚಿದಾನಂದಮೂರ್ತಿ, ಪುಟ: ೪೪.

ಗ್ರಂಥಋಣ:

೧. ಕವಿಜನಮಾರ್ಗ, ಸಂ: ಡಾ. ಕಲ್ಯಾಣರಾವ ಜಿ. ಪಾಟೀಲ ಮತ್ತು ಡಾ. ಈಶ್ವರಯ್ಯ ಮಠ.

೨. ವಚನ ಸಾಹಿತ್ಯ, ಡಾ. ಎಂ. ಚಿದಾನಂದಮೂರ್ತಿ, ಸಪ್ನಾ ಬುಕ್ ಹೌಸ್, ಬೆಂಗಳೂರು.